**ಅ.ದಾವಾ ನಂ. 336/2015** **ಪಿ.ಡಬ್ಲ್ಯೂ-2**

**ದಿನಾಂಕ 15/06/2018 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಕೆ.ಕೆ.ಆರ್ ವಕೀಲರಿಂದ**

ನಾನು ವ್ಯವಸಾಯ ಹಾಗೂ ಕೂಲಿ ಕೆಲಸ ಮಾಡುತ್ತೇನೆ. ಜಯಣ್ಣರವರ ಜಮೀನಿನಲ್ಲಿಯೂ ಕೂಲಿ ಕೆಲಸ ಮಾಡುತ್ತೇನೆ ಎಂದರೆ ಸರಿ. ವಾದಿ ಪ್ರತಿವಾದಿಯರು ನನಗೆ ನನ್ನ ತಂದೆಯ ಕಾಲದಿಂದಲೂ ಪರಿಚಯ. ನನ್ನ ಹಾಗೂ ದಾವಾ ಜಮೀನುಗಳ ನಡುವೆ ಸುಮಾರು 10 ಜನರ ಜಮೀನುಗಳಿವೆ. ವಾದಿ ದಾವಾ ಜಮೀನು ತಮಗೆ ಸೇರಿದ್ದು ಎಂದು ದಾವೆ ದಾಖಲಿಸಿದ್ದಾರೆ. ಸರ್ವೆ ನಂ. 79|1 ರಲ್ಲಿ 31.8 ಗುಂಟೆ ಜಮೀನು ಮಾತ್ರ ಇದೆ ಎಂದರೆ ಸರಿಯಲ್ಲ.

ದಿಃ 12.12.1996 ರಲ್ಲಿ ವಾದಿ ಪ್ರತಿವಾದಿಯರು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಜಮೀನು ವಾದಿ ಪ್ರತಿವಾದಿಯರ ಪಿತ್ರಾರ್ಜಿತವಾದ ಸ್ವತ್ತು ಎಂದರೆ ಸರಿ. ಸದರಿಯವರಿಗೆ ಅವುಗಳಲ್ಲಿ ಸಮಾನ ಹಕ್ಕು ಇದೆ ಎಂದರೆ ನನಗೆ ಗೊತ್ತಿಲ್ಲ. ವಾದಿ ಪ್ರತಿವಾದಿಯರು ದಾವಾ ಜಮೀನುಗಳ ಅರ್ದ ಅರ್ಧ ಕ್ಷೇತ್ರ ಗಳಲ್ಲಿ ಸ್ವಾಧೀನ ಇದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ವಾದಿಯೇ ಸದರರಿ ಜಮೀನುಗಳು ಸ್ವಾದೀನದಲ್ಲಿದ್ದಾರೆ ಎಂದು ನುಡಿಯುತ್ತಾರೆ. ನಾನು ವಾದಿಯ ಮನೆಗೆ ಕೆಲಸಕ್ಕೆ ಹೋಗುವುದರಿಂದ ಅವರ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಪ್ರತಿವಾದಿಯರು ದಾವಾ ಜಮೀನುಗಳಲ್ಲಿ ಸಮಾನವಾಗಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.**

**ಓ.ಹೇ.ಕೇ.ಸ.ಇ.**

**ಜೆಎಂಎಫ್‌ಸಿ., ಹೊಳೆನರಸೀಪುರ.**